## ನಕ್ಕುಬಿಡಿ





ದ್ವಿಚಕ್ರ ವಾಹನ ಸವಾರಿಯಲ್ಲಿ ಇಬ್ಬರಿಗೂ ಹೆಲ್ಮೆಟ್ ಕಡ್ಡಾಯ ಗೊಳಿಸಿದ ಬಳಿಕ ಪತ್ನಿ ಕಪಾಟಿನ ಬಾಗಿಲು ತೆರೆದು ಸೀರೆಗಳನ್ನು ಎಣಿಸುತ್ತಾ ಉಲಿದಳು, 'ಓ ದೇವರೇ, ಇನ್ನು ಮ್ಯಾಚಿಂಗ್ ಹೆಲ್ಮೆಟ್ ಖರೀದಿಸ ಬೇಕಾಗುತ್ತಲ್ವಾ..?'

ಗಾಬರಿಗೊಂಡ ಪತಿ ತನ್ನ ಸ್ಕೂಟರ್ ಮಾರಿಯೇ ಬಿಟ್ಟ!

★★★

ಮೆಡಿಕಲ್ ಅಂಗಡಿಯೊಂದರ ಹೊರಗೆ ಹೀಗೊಂದು ಬೋರ್ಡ್ ತೂಗು ಹಾಕಲಾಗಿತ್ತು...

'ನಮ್ಮಲ್ಲಿ ಮಾರಾಟವಾಗುವ ಎಲ್ಲಾ ಔಷಧಗಳ ಎಕ್ಸ್‌ಪೈರಿ ದಿನಾಂಕ ನಮಗೆ ತಿಳಿದಿದೆ. ಆದರೆ ನಿಮ್ಮದು ನಮಗೆ ತಿಳಿದಿಲ್ಲ. ಆದ್ದರಿಂದ ಸಾಲ ಕೇಳಬೇಡಿ'.

★★★

ಕಳ್ಳ ಬಂದ...

ತಿಜೋರಿಯ ಮೇಲೆ ಬರೆಯಲಾಗಿತ್ತು, 'ಒಡೆಯುವ ಅವಶ್ಯಕತೆಯಿಲ್ಲ, ಗುಂಡಿ ಅದುಮಿದರೆ ತೆರೆಯಲ್ಪಡುತ್ತದೆ'

ಸರಿ, ಕಳ್ಳ ಗುಂಡಿ ಅದುಮಿದ.

ತಕ್ಷಣ ಪೊಲೀಸರು ಆಗಮಿಸಿದರು!

ಪೊಲೀಸ್: ನಿನ್ನ ಪರವಾಗಿ ನೀನೇನಾದರೂ ಸಮಜಾಯಿಷಿ ನೀಡುವುದಿದೆಯೆ?

ಕಳ್ಳ: ನನಗಿಂದು ಮಾನವೀಯತೆಯ ಮೇಲಿನ ವಿಶ್ವಾಸವೇ ಉಡುಗಿ ಹೋಗಿದೆ ಮಹಾಸ್ವಾಮಿ!

★★★

ಎಂಜಿನಿಯರ್ ಓರ್ವ ತನ್ನ ಹಾಸಿಗೆಯ ಸುತ್ತ ಸೊಳ್ಳೆ ಪರದೆ ಕಟ್ಟಿ ಮಲಗಿದ್ದ. ಅದರಲ್ಲೊಂದು ರಂಧ್ರವಿದ್ದು ಅದರ ಮೂಲಕ ಸೊಳ್ಳೆಗಳು ಹಾಸಿಗೆಯೊಳ ನುಸುಳಿ ಕಚ್ಚುತ್ತಿದ್ದವು. ಎಂಜಿನಿಯರನ ತಲೆ ಹಾಳಾಯಿತು.. ಆತ ಪರದೆಯಲ್ಲಿ ಇನ್ನೊಂದು ರಂಧ್ರ ಮಾಡಿ ಅವೆರಡರ ಮೂಲಕ ಹಾದು ಹೋಗುವಂತೆ ಪೈಪ್ ಒಂದನ್ನು ಅಳವಡಿಸಿದ. ಈಗ ಸೊಳ್ಳೆಗಳ ತಲೆ ಹಾಳಾಗಿದೆ. ಪೈಪಿನ ಒಂದು ಬದಿಯಿಂದ ಒಳ ನುಸುಳಿದಷ್ಟೂ ಇನ್ನೊಂದು ಬದಿಯಿಂದ ಹೊರಬರಬೇಕಾಗುತ್ತಿದೆ.

★★★

ಗೆಳತಿ 1: ನಿನ್ನೆ ದಿನ ಪೂರ್ತಿ ಮೊಬೈಲ್‌ನಲ್ಲಿ ನೆಟ್ ಇರಲಿಲ್ಲ ಕಣೆ.

ಗೆಳತಿ 2: ಓಹ್... ಮತ್ತೆ ನೀನೇನು ಮಾಡಿದೆ?

ಗೆಳತಿ 1: ಏನೂ ಇಲ್ಲ, ನಮ್ಮೆಜಮಾನ್ರ ಜೊತೆ ಮಾತುಕತೆಯಾಡಿ ದಿನ ಕಳೆದೆ... ಆದರೆ ಒಂದು ಪ್ರಯೋಜನವಾಯಿತು. ಸ್ವಭಾವತಃ ಅವರೂ ಒಳ್ಳೆಯ ಮನುಷ್ಯ ಎಂದು ನಿನ್ನೆ ಅನಿಸಿತು ಕಣೆ!

★★★

ಗುಂಡ: ಈ ಸಮೋಸ ಚೆನ್ನಾಗಿಲ್ಲ, ಯಾಕೆ ಕಣಯ್ಯಾ.... ಮೊನ್ನೆಯದ್ದು ತುಂಬಾ ಚೆನ್ನಾಗಿತ್ತು..?

ಅಂಗಡಿಯಾತ: ಯಾಕೆ ಸಾರ್ ಹಾಗೆ ಹೇಳ್ತೀರಾ... ಇದು ಮೊನ್ನೆಯದ್ದೇ...!

★★★

ಆಪತ್ಕಾಲದಲ್ಲೂ ಪತ್ನಿಯಿಂದ ಸಾಲ ತೆಗೆದುಕೊಳ್ಳಬಾರದು.

ನಾಲ್ಕು ತಿಂಗಳ ಹಿಂದೆ ನಾನೊಮ್ಮೆ ಎರಡು ಸಾವಿರ ರೂಪಾಯಿ ತೆಗೆದು ಕೊಂಡಿದ್ದೆ. ಈ ತನಕ ಮೂರು ಬಾರಿ ಹಿಂತಿರುಗಿಸಿಯಾಗಿದೆ. ಇನ್ನೂ ಎರಡೂವರೆ ಸಾವಿರ ಬಾಕಿ ಕೇಳುತ್ತಿದ್ದಾಳೆ.

★★★

ಮಾನವನ ಮೆದುಳು ಅನವರತ ಕ್ರಿಯಾಶೀಲವಾಗಿರುತ್ತದೆ. ಆದರೆ ಎರಡು ಬಾರಿ ಅದಕ್ಕೆ ಮಂಕು ಬಡಿಯುತ್ತದೆ.

1) ಪರೀಕ್ಷೆ ಬರೆಯುತ್ತಿರುವಾಗ

2) ವಧು ಪರೀಕ್ಷೆಯ ಸಮಯದಲ್ಲಿ.

★★★

ಗುಂಡ ಮನೆಯೊಳಗೆ ಬಂದು ನೇರ ಬೆಡ್ ರೂಮ್ ಹೊಕ್ಕು ಹಾಸಿಗೆಯಲ್ಲಿ ಒರಗಿಕೊಂಡ.

ಮನೆಯಾಕೆ ಕೇಳಿದಳು, 'ಏನು ಕುಡಿದು ಬಂದಿದ್ದೀರಾ?'

ಗುಂಡ: ಹೌದು, ನಿಮಗೆ ಹೇಗೆ ತಿಳಿಯಿತು?

ಆಕೆ ನಸು ನಾಚುತ್ತಾ ಉತ್ತರಿಸಿದಳು. 'ಇದು ನಿಮ್ಮ ಮನೆಯಲ್ಲ, ಪಕ್ಕದ್ದನೆ.

**(ಸಂಗ್ರಹ) ರಮಣ್‌ಶೆಟ್ಟಿ ರೆಂಜಾಳ್ ಮುಂಬೈ**


